ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1251/2021

ಚಾಸಾ:6 ಪ್ರಾಸಾ:6

ದಿನಾಂಕ: 23.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪ್ರಮೋದಾ |
| ಗಂಡನ ಹೆಸರು | : | ಲೇಟ್ ಪ್ರವೀಣ ನಾಯ್ಕ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 18-02-2021 ರಂದು ನನ್ನ ಗಂಡನಿಗೆ ಕೊಟೇಶ್ವರದ ಪ್ರೀತಂ ಬಾರ್ ಬಳಿ ಅಪಘಾತವಾಗಿದ್ದು, ಎ.ಪಿ.ಎಂ ಬಸ್ಸು ಡಿಕ್ಕಿಪಡಿಸಿರುವುದಾಗಿ ಆತನ ಸ್ನೇಹಿತ ಕರೆ ಮಾಡಿ ನನಗೆ ತಿಳಿಸಿರುತ್ತಾರೆ. ಬಸ್ಸು ಚಾಲಕನ ತಪ್ಪಿ ನಿಂದ ಅಪಘಾತವಾಯಿತು ಎಂದು ತಿಳಿದು ಬಂದಿರುತ್ತದೆ. ಆ ದಿನ ನನ್ನ ಗಂಡ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿದ್ದರು. ಆತ ಅಪಘಾತದಿಂದ ಮೃತಪಟ್ಟಿದ್ದು ನಾನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನಿಪಿ-9ರ ದ್ವಿ ಚಕ್ರ ವಾಹನದ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಇಂಡಿಮಿನಿಟಿ ಬಾಂಡನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ರಾತ್ರಿ 9 ಗಂಟೆಗೆ ನನಗೆ ಮಾಹಿತಿ ಬಂದಿರುತ್ತದೆ. ನನ್ನ ಗಂಡ ಎಲ್ಲಿ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿದ್ದರು ಎಂದು ತಿಳಿದಿಲ್ಲ. ನಾನು ಆಗ ಕೋಡಿಯ ಮನೆಯಲ್ಲಿ ಇದ್ದೆ. ರಾತ್ರಿ ನಾನು ಸ್ಥಳಕ್ಕೆ ಹೋಗಲಿಲ್ಲ. ಅಪಘಾತ ಹೇಗಾಯಿತು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಬಸ್ಸಿ ನ ಚಾಲಕ ಯಾರಾಗಿದ್ದರು ಎಂದು ನನಗೆ ತಿಳಿದಿಲ್ಲ. ಮಾರನೇ ದಿನ ಪೊಲೀಸರು ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ಅನಂತರ ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಅಪಘಾತ ನೋಡದ ಕಾರಣ ಯಾರ

ತಪ್ಪಿನಿಂದ ಅಪಘಾತ ಸಂಭವಿಸಿದ ಎಂದು ಹೇಳಲಾಗುವುದಿಲ್ಲ. ಅಪಘಾತದ ಪರಿಹಾರ ನಮಗೆ ಸಿಕ್ಕಿರುತ್ತದೆ. ಬಸ್ಸಿ ನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲದೆ ನನ್ನ ಗಂಡನ ಅಜಾಗರೂಕತೆಯಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**